ಮೈಸೂರ ಗೆಜೆಟ್ಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರಿ ತಾ|| 24, ಸ್ಯ 1885.

ಸೂ॥ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗಿರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ಜೀಫ್ ಕೋರ್ಟನಲ್ಲಿ.

ಕ್ರಿಮಿನಲ್ ತರಫ್.

ಸ್ಯ 1885ನೇ ಇಸವಿ ಜನವರೀ 6ನೇ ಮುಕ್ತಂ ರೂಲ್ ಆಫ್ ಪ್ರಾಕ್ಟಿಸ್ ನಂಬರ್ 38.

ಸ್ಯ 1883ನೇ ಇಸವಿ ಜುಲ್ಯೈ 5ನೇ ಮುಕ್ತಂ 30ನೇ ನಂಬರ್ ಕ್ರಿಮಿನಲ್ ರೂಲ್ಆಫ್ ಪ್ರಾಕ್ಟಿಸ್ಗೆ ಈ ಕೆಳಗೆ ನಮೂದಾಗುವ ಕಲಮನ್ನು ಕೇರಿಸಬೇಕೆಂಯು ಜೀಫ್ ಕೋರ್ಟನವರು ಹುಕ್ಕುಂ ಮಾಡುತ್ತಾರೆ.

ಕಲಂ—8. 6ನೇ ಕಲಂಮೇರೆ ಜೀಫ್ ಕೋರ್ಟಿಗೆ ರವಾನೆ ಮಾಡಬೇಕಾದ ಅಪ್ಪೀಲ್ನಲ್ಲಿ ಹುಟ್ಟಿದ ಜಡ್ಜ್ಮೆಂಟ್ ಕಾಪಿಯನ್ನು ಯಾವ ಜಡ್ಜ್ಮೆಂಟ್ ಯಾ ಆರ್ಡರ್ ಮೇಲೆ ಅಪ್ಪೀಲ್ ದಾಖಲಾಯಿತೋ ಅಂಥಾದ್ದರ 1 ಕಾಪಿಯೊಡನೆ ಯಾವಾಗಲೂ ಕಳುಹಿಸಬೇಕು.

ಮೆಲ್ಕಂಡ ರೂಲ್ಆಫ್ ಪ್ರಾಕ್ಟಿಸಿಗೆ ಈ ಕೆಳಗೆ ನಮೂದಾಗುವದನ್ನು ಕೇರಿಸಬೇಕು.

ಫಸ್ಟ್ಕ್ಲಾಸ್ ಮಾಜಿಸ್ಟ್ರೇಟರು ಮತ್ತು ಸೆಷ್ಷ ಕೋರ್ಟಿಗೆ ಕಮ್ಮಿಟ್ ಮಾಡುವ ಅಧಿಕಾರ ಹೊಂದಿದ ಮಾಜಿಸ್ಟ್ರೇಟರು ಕಳುಹಿಸುವ ಸ್ಟೇಟ್ಮೆಂಟ್ಗಳ ಮೇಲೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು ಆವಶ್ಯಕವಾದ ಆರ್ಡರ್ ಮಾಡಿದ ತರುವಾಯ ಅವುಗಳನ್ನ ಅವುಗಳು ತಮ್ಮಲ್ಲಿಗೆ ತಲುಪಿದ 48 ಘಂಟೆ ಒಳಗಾಗಿ ಸೆಷ್ಷಕೋರ್ಟಿನ ತನಖೀ ಬಗ್ಯೆ ಆ ಕೋರ್ಟಿಗೆ ಕಳುಹಿಸಬೇಕು. ಬಂಗಳೂರು, ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು ಅಂಥಾ ಸ್ಟೇಟ್ಮೆಂಟ್ಗಳನ್ನು ಜೀಫ್ ಕೋರ್ಟಿಗೆ ಕಳುಹಿಸಬೇಕು.

ಹುಕ್ಕುಂ ಬವೋಜೇಬ್,

ಎಸ್. ಹೇವೂಜಿರಾವ್,

ರಿಜಿಸ್ಟ್ರಾರ್.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲ್ಯೈ 1883.

ಲಂಡ್ಯನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್ಗಳ ಮೇಲೆ ಲಂಡ್ಯನಲ್ಲಿ, ಸ್ಟ್ಯಾಂಫ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ಕೋ ಯನೆರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಆವ